ಕೂತ. ಪೇಪರ್ ಓದಿ ಎಷ್ಟೋ ದಿನವಾಗಿತ್ತು. ಅದು ಯಾವುದೋ ಹಳೆಯ ಪೇಪರು. ಅವನಿಗೆ ತಾರೀಕು ಕೂಡ ಮರೆತುಹೋಗಿತ್ತು! ಮುಂದಿನ ಐದು ಹತ್ತು ನಿಮಿಷದಲ್ಲಿ ಮಲ್ಲಿಕಾ ಮೆಟ್ಟಲಿಳಿದು ಕೆಳಗೆ ಬರುತ್ತಿದ್ದುದು ಅವಳ ಹೈ ಹೀಲ್ಡ್ ಹೆಜ್ಜೆಗಳ ಟಕಟಕದಿಂದಲೇ ಅವನಿಗೆ ಗೊತ್ತಾಯಿತು. ಅದು ಅವಳು ಸಿಕ್ಕ ಮೊದಲ ವರ್ಷ ಅವನ ಕಿವಿಗೆ ರೂಢಿಯಾಗಿದ್ದ ಸದ್ದು! ಈಚಿನ ವರ್ಷಗಳಲ್ಲಿ ಅವಳ ಹೆಜ್ಜೆಯ ಟಕಟಕ ಕೊಂಚ ಬಿರುಸಾಗಿತ್ತು. ಅವಳ ಹೆಜ್ಜೆಗೆ ಹಲವು ವರ್ಷಗಳ ಹಿಂದಣ ಲಯ ಮತ್ತೆ ಬಂದದ್ದು ರಮೇಶನಿಗೆ ವಿಸ್ಮಯ ಹುಟ್ಟಿಸಿತು!

ಮುಖಕ್ಕೆ ಅಡ್ಡವಿದ್ದ ಪೇಪರನ್ನು ಕೆಳಗಿಳಿಸದೆಯೇ ಮಲ್ಲಿಕಾಳ ಹೈ ಹೀಲ್ಡ್ ಸದ್ದಿನ ಸಪ್ಪಳಕ್ಕೆ ಕಿವಿಗೊಟ್ಟು... ಮಲ್ಲಿಕಾ ಮುಂದೇನು ಮಾಡಬಹುದು ಎಂದು ರಮೇಶ್ ಎದುರು ನೋಡುತ್ತಾ ಕೂತ. ಚಪ್ಪಲಿಯ ಟಕಟಕ ಹತ್ತಿರವಾದಂತೆ ಮೆಲ್ಲಗೆ, ನಾಟಕೀಯವಾಗಿ ಪೇಪರ್ ಕೆಳಗಿಳಿಸಿ ಕೊಂಚ ಸಂದಿಗ್ಧದಲ್ಲೇ ಅವಳತ್ತ ನೋಡಿದ: ಮಲ್ಲಿಕಾ ಮುಖ ಏಳೆಂಟು ವರ್ಷಗಳ ಕೆಳಗೆ ಮುಂಬಯಿಯಿಂದ ಓದು ಮುಗಿಸಿ ವಾಪಸ್ ಬಂದು ತನಗೆ ಆಗಾಗ್ಗೆ ಸಿಗುತ್ತಿದ್ದ ಕಾಲದಲ್ಲಿ ಕಾಣುತ್ತಿದ್ದಂತೆ ಹಗುರಾಗಿ ಕಂಡಿತು. ಅದೇ ಪ್ರಸನ್ನ ಮುಖದಲ್ಲಿ ಒಂದೊಂದೇ ಹೆಜ್ಜೆಯಿಟ್ಟು ಹತ್ತಿರ ಹತ್ತಿರ ಬರುತ್ತಿದ್ದ ಮಲ್ಲಿಕಾ ಏಕಾಏಕಿ, 'ಸ್ಕೂಲ್ ಕತೆ ಏನಾಯ್ತು?' ಅಂದಾಗ ರಮೇಶನಿಗೆ ಅಚ್ಚರಿಯಾಯಿತು. ಹಿಂದೆ ಯಾವತ್ತೋ ಮಾತಾಡಿದ್ದನ್ನು ನಿನ್ನೆ ರಾತ್ರಿಯಿನ್ನೂ ಮಾತಾಡಿಕೊಂಡಿದ್ದೆವೇನೋ ಎಂಬಷ್ಟು ಸಲೀಸಾಗಿ ಮಲ್ಲಿಕಾ ಕೇಳಿದ ರೀತಿ ಕಂಡು ಅವಾಕ್ಕಾದ ರಮೇಶನ ಬಾಯಿಂದ ಚಣ ಸೊಲ್ಲೇ ಹೊರಡಲಿಲ್ಲ. ಆ ಸ್ಕೂಲಿನ ವಿಷಯದಲ್ಲಿ ಒಂದು ಹೆಜ್ಜೆ ಕೂಡ ಮುಂದಿಡದಿದ್ದರೂ, 'ತಾವು ಪ್ರಿನ್ಸಿಪಾಲ್ ಪೋಸ್ಟ್ ಒಪ್ಪಿಕೊಂಡರೆ ನಾಳೆಯೇ ಕೆಲಸ ಶುರು ಮೇಡಂ' ಎಂದುಬಿಟ್ಟ!

> ತಮ್ಮತಮ್ಮೊಳಗೇ ತಾವು ಮುಳುಗಿ ವಿನಾಶದ ಹಾದಿಯಲ್ಲಿದ್ದ ಎರಡು ಯುವ ಮನಸುಗಳು... ಒಂದು ಗಂಟೆ ಥಣ್ಣಗೆ ಕೂತು ತಮ್ಮ ಬಗ್ಗೆ ತಾವು ಯೋಚಿಸುವ ವ್ಯವಧಾನವೂ ಇರದೆ ರೊಳ್ಳಾಗತೊಡಗಿದ್ದವು...

ಮಲ್ಲಿಕಾ ಅಷ್ಟೊಂದು ಉಮೇದಿನಿಂದ ಇದ್ದಕ್ಕಿದ್ದಂತೆ ಈಗ ಸ್ಕೂಲಿನ ವಿಷಯ ಎತ್ತಿದ್ದಕ್ಕೆ ರಂಜಿತಾ ಕೂಡ ಕಾರಣವಾಗಿದ್ದಳೆಂಬುದನ್ನು ರಮೇಶ ಊಹಿಸಲೂ ಸಾಧ್ಯವಿರಲಿಲ್ಲ! ನರ್ಸಿಂಗ್ ಹೋಮಿನ ಹಾಸಿಗೆಯಲ್ಲಿ ಮಲಗಿ ತನ್ನ ಈವರೆಗಿನ ಬದುಕಿನ ಏರಿಳಿತಗಳನ್ನು ಮಲ್ಲಿಕಾ ಜೊತೆ ಮೆಲುಕು ಹಾಕುತ್ತಿದ್ದ ರಂಜಿತಾ, ಮುಂದಿನ ಒಂದೆರಡು ವರ್ಷ ಸಿನಿಮಾ–ಗಿನಿಮಾ ಬಿಟ್ಟು ಮತ್ತೆ ಗಂಭೀರವಾಗಿ ಡ್ಯಾನ್ಸಿಗೆ ಮರಳಬೇಕೆಂದು ಯೋಚಿಸಿದ್ದಳು. ಅದರ ಬಗ್ಗೆ ಮಾತಾಡುತ್ತಾ, ಮಲ್ಲಿಕಾ–ರಮೇಶ್ ಸೇರಿ ಸ್ಕೂಲ್ ಮಾಡುವುದಾದರೆ ಅದಕ್ಕೆಂದೇ ಬೆನಿಫಿಟ್ ಶೋ ಮಾಡಿ ಹಣ ಜೋಡಿಸಿ ಕೊಡುವುದಾಗಿಯೂ ಮಲ್ಲಿಕಾಗೆ ಹೇಳಿದ್ದಳು. ಅಷ್ಟೇ ಅಲ್ಲ, ಆ ಸ್ಕೂಲಿನಲ್ಲಿ ಶನಿವಾರ, ಭಾನುವಾರ ಫ್ರೀಯಾಗಿ ಮಕ್ಕಳಿಗಾಗಿ ಡ್ಯಾನ್ಸ್ ಕ್ಲಾಸುಗಳನ್ನು ನಡೆಸುತ್ತಾ, ತನ್ನ ಬದುಕಿನ ದಿಕ್ಕನ್ನೇ ಕೊಂಚ ಬದಲಿಸಿಕೊಳ್ಳಲು ರಂಜಿತಾ ಬಯಸಿದ್ದಳು. ಕೊನೆಗೆ, 'ಡೋಂಟ್ ಮಿಸ್ಟೇಕ್ ಮಿ ಮಲ್ಲಿಕಾ! ನಿನಗೆ ಒಂದು ಮಾತು ಹೇಳಲೇಬೇಕು' ಎಂದ ರಂಜಿತಾ, ತನ್ನ ಹಾಗೆ ಮಲ್ಲಿಕಾ–ರಮೇಶ್ ಇಬ್ಬರೂ ಸಿಲ್ಲಿ ಜಗಳಗಳಲ್ಲಿ ತಮ್ಮ ಎನರ್ಜಿಯನ್ನೂ, ಪಾಸಿಬಲಿಟಿಗಳನ್ನೂ ಹಾಳು ಮಾಡಿಕೊಳ್ಳಬಾರದೆಂದೂ, ಇಬ್ಬರೂ ಒಟ್ಟಿಗೇ ಸೇರಿ ಈ ಸ್ಕೂಲ್